"ಮಧುರ ಮಕ್ಕಳೇ - ಶ್ರೀಮತದಂತೆ ನಡೆದು ತಮ್ಮ ಕರ್ಮಗಳನ್ನು ಸುಧಾರಣೆ ಮಾಡಿಕೊಳ್ಳಿ, ವಿಕರ್ಮಗಳನ್ನು ಭಸ್ಮ ಮಾಡಿ, ಮಾಲೆಯ ಮಣಿಯಾಗಬೇಕೆಂದರೆ ಒಬ್ಬ ತಂದೆಯ ವಿನಃ ಬೇರೆ ಯಾರೂ ನೆನಪಿಗೆ ಬರಬಾರದು"

ಪ್ರಶ್ನೆ: ಯಾವ ಮಕ್ಕಳ ರಕ್ಷಣೆಯು ತಂದೆಯೇ ಸ್ವತಹ ಮಾಡುತ್ತಾರೆ?

ಉತ್ತರ: ಯಾರು ಎಷ್ಟು ಸ್ವಚ್ಛತೆಯಿಂದ ನಡೆಯುತ್ತಾರೆ, ತಂದೆಯ ಜೊತೆ ಸತ್ಯವಾಗಿರುತ್ತಾರೆ, ಅವರ ರಕ್ಷಣೆಯು ಸ್ವತಹವಾಗಿ ಆಗುತ್ತಿರುತ್ತದೆ. ಅಸತ್ಯವಾಗಿ ನಡೆದುಕೊಳ್ಳುವವರ ರಕ್ಷಣೆಯಾಗುವುದಿಲ್ಲ. ಮಾಯೆಯು ಅವರನ್ನು ಬಹಳ ಆಕರ್ಷಿಸುತ್ತದೆ, ಅಂತಹವರಿಗೆ ಶಿಕ್ಷೆಯು ನಿಗಧಿಯಾಗುತ್ತದೆ.

ಪ್ರಶ್ನೆ: ಮಕ್ಕಳು ಆತ್ಮಿಕ ಸರ್ಜನ್ನಿಂದ ತಮ್ಮ ಕಾಯಿಲೆಯನ್ನು ಏಕೆ ಬಚ್ಚಿಡುತ್ತಾರೆ?

ಉತ್ತರ: ಏಕೆಂದರೆ ಅವರಿಗೆ ತಮ್ಮ ಗೌರವದ ಭಯವಿರುತ್ತದೆ. ಮಾಯೆ ನಮಗೆ ಮೋಸ ಮಾಡಿದೆ ಎಂದು ತಿಳಿದುಕೊಂಡಿರುತ್ತಾರೆ. ಕುದೃಷ್ಟಿಯಾದ ನಂತರವೂ ತಂದೆಯಿಂದ ಬಚ್ಚಿಡುತ್ತಾರೆ. ತಂದೆಯು ತಿಳಿಸುತ್ತಾರೆ - ಮಕ್ಕಳೇ, ನೀವು ಎಷ್ಟೆಷ್ಟು ಮುಚ್ಚಿಡುತ್ತೀರಿ ಅಷ್ಟು ಕೆಳಗಿಳಿಯುತ್ತೀರಿ. ನಿಮ್ಮನ್ನು ಮಾಯೆಯು ಕಬಳಿಸುತ್ತದೆ, ನಂತರ ವಿದ್ಯೆಯನ್ನು ಬಿಡುತ್ತೀರಿ ಆದ್ದರಿಂದ ಬಹಳ ಎಚ್ಚರಿಕೆಯಿರಬೇಕು. ಮನ ಮತ ಅಥವಾ ಆಸುರಿ ಮತದಂತೆ ನಡೆಯಬಾರದು.

ಓಂ ಶಾಂತಿ. ಆತ್ಮಿಕ ತಂದೆಯು ಆತ್ಮಿಕ ಮಕ್ಕಳಿಗೆ ತಿಳಿಸಿಕೊಡುತ್ತಾರೆ, ಆತ್ಮಿಕ ತಂದೆಯೇ ಆತ್ಮಗಳಿಗೆ ಓದಿಸುತ್ತಾರೆಂಬ ನಿಶ್ಚಯ ಮಕ್ಕಳಿಗಿದೆ, ಆದುದರಿಂದ ಆತ್ಮರು ಪರಮಾತ್ಮನಿಂದ ಅಗಲಿದ್ದರೆಂಬ ಗಾಯನವಿದೆ....... ಮೂಲವತನದಲ್ಲಿ ಎಲ್ಲಾ ಆತ್ಮರು ಜೊತೆಯಲ್ಲಿರುತ್ತವೆ. ಅಲ್ಲಿದ್ದಾಗ ಬೇರೆಯಾಗಿರುವುದಿಲ್ಲ ನಂತರ ಅಲ್ಲಿಂದ ಆತ್ಮಗಳು ಅಗಲುವರು. ಇಲ್ಲಿಗೆ ಬಂದು ತಮ್ಮ-ತಮ್ಮ ಪಾತ್ರವನ್ನು ಅಭಿನಯಿಸುತ್ತಾರೆ. ಸತೋಪ್ರಧಾನದಿಂದ ಇಳಿಯುತ್ತಾ-ಇಳಿಯುತ್ತಾ ತಮೋಪ್ರಧಾನರಾಗುತ್ತಾರೆ ಆದುದರಿಂದ ಹೇ! ಪತಿತ ಪಾವನ ಬನ್ನಿ, ಬಂದು ಪಾವನ ಮಾಡಿ ಎಂದು ಕರೆಯುತ್ತಾರೆ. ನಾನು ಪ್ರತೀ 5 ಸಾವಿರ ವರ್ಷಕ್ಕೊಮ್ಮೆ ಬರುತ್ತೇನೆಂದು ಮಕ್ಕಳಿಗೆ ತಂದೆಯು ತಿಳಿಸುತ್ತಾರೆ. ಈ ಸೃಷ್ಟಿ ಚಕ್ರವೇ 5 ಸಾವಿರ ವರ್ಷಗಳ ಚಕ್ರವಾಗಿದೆ. ನಿರಾಕಾರ ಶಿವ ತಂದೆಯು ಅಗತ್ಯವಾಗಿ ಶರೀರದ ಮೂಲಕ ಹೇಳುತ್ತಾರೆ. ಮೇಲಿನಿಂದ ಯಾವುದೇ ಪ್ರೇರಣೆ ಮುಂತಾದವುಗಳನ್ನು ಕೊಡುವುದಿಲ್ಲ. ಹೇಗೆ ನೀವಾತ್ಮರು ಶರೀರವನ್ನು ಧಾರಣೆ ಮಾಡಿ ಸಂಭಾಷಣೆ ಮಾಡುತ್ತೀರಿ, ತಂದೆಯೂ ಸಹ ಈ ಶರೀರದ ಮೂಲಕ ನಾನು ನಿಮ್ಮೊಂದಿಗೆ ಮಾತನಾಡುತ್ತೇನೆ. ನಾನು ಮಕ್ಕಳಿಗೆ ಇವರ (ಬ್ರಹ್ಮಾ) ಮೂಲಕ ಆದೇಶವನ್ನು ಕೊಡುತ್ತೇನೆ. ಯಾರು ಎಷ್ಟು ನನ್ನ ಆದೇಶದಂತೆ ನಡೆಯುತ್ತಾರೆ ಅಷ್ಟು ತಮ್ಮ ಕಲ್ಯಾಣವನ್ನು ಮಾಡಿಕೊಳ್ಳುತ್ತಾರೆ. ತಂದೆಯಂತೂ ತಿಳಿಸಿಕೊಡುತ್ತಾರೆ ನಂತರ ಯಾರೇ ಆಗಲಿ ಶ್ರೀಮತದಂತೆ ನಡೆಯಲಿ ಅಥವಾ ನಡೆಯದೇ ಇರಲಿ, ಶಿಕ್ಷಕ ಹೇಳಿದ್ದನ್ನು ಕೇಳಲಿ ಅಥವಾ ಕೇಳದಿರಲಿ, ಅವರು ತಮಗಾಗಿ ಲಾಭ ಅಥವಾ ನಷ್ಟವನ್ನು ಮಾಡಿಕೊಳ್ಳುತ್ತಾರೆ. ಹೇಳಿದ್ದನ್ನು ಕೇಳದಿದ್ದರೆ ಫೇಲ್ ಆಗುವರು. ಶಿವ ತಂದೆಯು ಬಹಳ ಚೆನ್ನಾಗಿ ತಿಳಿಸುತ್ತಾರೆ. ನೀವು ಮಕ್ಕಳು ಶಿವ ತಂದೆಯಿಂದ ಕಲಿತು ಅನ್ಯರಿಗೂ ಸಹ ಕಲಿಸಬೇಕು. ತಂದೆಯನ್ನು ಶೃಂಗಾರ ಮಾಡಬೇಕು. ಇದರಲ್ಲಿ ಶಾರೀರಿಕ ತಂದೆಯ ಮಾತಿಲ್ಲ, ಆತ್ಮಿಕ ತಂದೆಯ ಮಾತಾಗಿದೆ. ಯಾರೆಷ್ಟು ಶ್ರೀಮತದಂತೆ ನಡೆಯುತ್ತಾರೆ, ಆಸ್ತಿಯನ್ನು ಅಷ್ಟೇ ಪಡೆಯುತ್ತಾರೆ ಎಂಬುದನ್ನು ಮಕ್ಕಳು ತಿಳಿದುಕೊಂಡಿದ್ದೀರಿ. ನೀವು ನನ್ನನ್ನು ನೆನಪು ಮಾಡಿದಾಗ ನಿಮ್ಮ ಜನ್ಮ-ಜನ್ಮಾಂತರದ ಪಾಪವು ನಾಶವಾಗುತ್ತದೆ ಎಂದು ತಂದೆಯು ತಿಳಿಸುತ್ತಾರೆ ಏಕೆಂದರೆ ರಾವಣ ರಾಜ್ಯದಲ್ಲಿ ಪಾಪಾತ್ಮರು ಪುಣ್ಯಾತ್ಮರ ಮುಂದೆ ತಲೆ ಬಾಗುತ್ತಾರೆ. ಆದರೆ ಪುಣ್ಯಾತ್ಮರೇ ನಂತರ ಪಾಪಾತ್ಮರಾಗುತ್ತಾರೆಂದು ಅವರಿಗೆ ಗೊತ್ತಿಲ್ಲ. ಅವರು ಸದಾ ಪುಣ್ಯಾತ್ಮರಾಗಿರುತ್ತಾರೆಂದು ತಿಳಿದುಕೊಳ್ಳುತ್ತಾರೆ. ತಂದೆಯು ತಿಳಿಸುತ್ತಾರೆ - ಪುನರ್ಜನ್ಮವನ್ನು ತೆಗೆದುಕೊಳ್ಳುತ್ತಾ-ತೆಗೆದುಕೊಳ್ಳುತ್ತಾ ಪುಣ್ಯಾತ್ಮನಿಂದ ಪಾಪಾತ್ಮರಾಗುತ್ತೀರಿ. 84 ಜನ್ಮ ತೆಗೆದುಕೊಳ್ಳುತ್ತೀರೆಂದರೆ ಸತೋಪ್ರಧಾನದಿಂದ ತಮೋಪ್ರಧಾನತೆಯಲ್ಲಿ ಬರುತ್ತೀರಿ. ಪಾಪಾತ್ಮರಾದ ನಂತರ ತಂದೆಯನ್ನು ನೆನಪು ಮಾಡುತ್ತೀರಿ. ಪುಣ್ಯಾತ್ಮರಾಗಿದ್ದಾಗ ತಂದೆಯನ್ನು ನೆನಪು ಮಾಡುವ ಅವಶ್ಯಕತೆಯೇ ಇರುವುದಿಲ್ಲ. ಈಗ ಈ ಎಲ್ಲಾ ಮಾತುಗಳನ್ನು ಎಲ್ಲರಿಗೂ ತಂದೆಯೇ ಕುಳಿತು ತಿಳಿಸಿಕೊಡುವುದಿಲ್ಲ. ಮಕ್ಕಳು ಸೇವೆ ಮಾಡುತ್ತಾರೆ, ಮನುಷ್ಯರಂತೂ ಈ ಸಮಯದಲ್ಲಿ ಆಸುರರಾಗುತ್ತಿದ್ದಾರೆ ಆದ್ದರಿಂದ ಅವರ ಬುದ್ಧಿಯಲ್ಲಿ ಪರಮಾತ್ಮ ಸರ್ವವ್ಯಾಪಿಯಲ್ಲ ಎಂಬುದು ಕುಳಿತುಕೊಳ್ಳುವುದಿಲ್ಲ. ಎಲ್ಲದರ ಆಧಾರವು ಈ ಮಾತಿನಲ್ಲಿದೆ. ಕೃಷ್ಣನು ದೇಹಧಾರಿಯಾಗಿದ್ದಾನೆ, ಕೃಷ್ಣನಿಗೆ ದೇವತಾ ಎಂದು ಕರೆಯಲಾಗುತ್ತದೆ. ಆತ್ಮಗಳ ತಂದೆ ನಿರಾಕಾರ ತಂದೆ ಆಗಿದ್ದಾರೆ. ಅವರನ್ನೇ ನೆನಪು ಮಾಡಬೇಕು. ಪ್ರಜಾಪಿತನೆಂದು ಹೇಳುತ್ತಾರೆ ಆದರೆ ಪ್ರಜಾಪಿತನೂ ಸಾಕಾರ ಮನುಷ್ಯನಾಗಿದ್ದಾರೆ. ಈ ಎಲ್ಲಾ ಮಾತುಗಳನ್ನು ಸ್ಪಷ್ಟವಾಗಿ ತಿಳಿಸಲಾಗುತ್ತದೆ ಆದರೆ ಕೆಲವು ಮಕ್ಕಳು ತಿಳಿದುಕೊಳ್ಳದ ಕಾರಣ ಉಲ್ಟಾ ಮಾರ್ಗವನ್ನು ಹಿಡಿದು ಕಾಡಿಗೆ ಹೋಗುತ್ತಾರೆ. ತಂದೆಯು ಪಟ್ಟಣ ಅಥವಾ ಸ್ವರ್ಗದಲ್ಲಿ ಹೋಗುವಂತಹ ಮಾರ್ಗವನ್ನು ತೋರಿಸುತ್ತಾರೆ ಆದರೆ ತಿಳಿದುಕೊಳ್ಳದಿರುವ ಕಾರಣ ಕಾಡಿನಲ್ಲಿ (ವಿಕಾರದಲ್ಲಿ) ಹೋಗಿ ಸಿಕ್ಕಿಕೊಳ್ಳುತ್ತಾರೆ. ಕಾಡಿನಲ್ಲಿ

ಹೋದನಂತರ ಮುಳ್ಳಾಗುತ್ತಾರೆ. ಇಲ್ಲಿದ್ದರೂ ಸಹ ಮಾರ್ಗವನ್ನು ಪೂರ್ಣವಾಗಿ ನಡೆಯುವುದಿಲ್ಲ, ಮಧ್ಯದಲ್ಲಿಯೇ ನಿಂತು ಬಿಡುತ್ತಾರೆ. ಅಂತಹವರು ನಂತರ ಸತ್ಯಯುಗದಲ್ಲಿಯೂ ಸಹ ಅಂತ್ಯದಲ್ಲಿ ಬರುತ್ತಾರೆ. ನೀವಿಲ್ಲಿಗೆ ಸ್ವರ್ಗದಲ್ಲಿ ಹೋಗಲು ಬಂದಿದ್ದೀರಿ. ತ್ರೇತಾಯುಗಕ್ಕೆ ವಾಸ್ತವದಲ್ಲಿ ಸ್ವರ್ಗವೆಂದು ಹೇಳುವುದಿಲ್ಲ ಏಕೆಂದರೆ 25% ಕಡಿಮೆ ಆಗುತ್ತದೆಯಲ್ಲವೇ! ಈಗ ನೀವು ಸಂಗಮದಲ್ಲಿದ್ದೀರಿ. ಈ ಹಳೆಯ ಪ್ರಪಂಚವನ್ನು ತ್ಯಾಗ ಮಾಡಿ ಹೊಸ ಪ್ರಪಂಚವನ್ನು ನೆನಪು ಮಾಡಿ ಎಂದು ತಂದೆಯು ತಿಳಿಸುತ್ತಾರೆ ಆದರೆ ಹಳೆಯ ಪ್ರಪಂಚವನ್ನು ಮರೆತು ತ್ರೇತಾ ಯುಗವನ್ನು ನೆನಪು ಮಾಡಿ ಎಂದು ಎಂದಿಗೂ ಹೇಳುವುದಿಲ್ಲ. ತ್ರೇತಾಯುಗವನ್ನು ಹೊಸ ಪ್ರಪಂಚವೆಂದು ಹೇಳುಲಾಗುತ್ತದೆಯೇ! ಯಥಾರ್ಥ ಮಾರ್ಗದಲ್ಲಿ ನಡೆಯದಿರುವ ಕಾರಣ ಏರುಪೇರು ಆಗುತ್ತಿರುತ್ತಾರೆ. ನಾಟಕದನುಸಾರ ಕಲ್ಪದ ಮೊದಲು ಪರೀಕ್ಷೆಯಲ್ಲಿ ಯಾರು ತೇರ್ಗಡೆಯಾಗಿದ್ದರು ಅವರೇ ಆಗುತ್ತಾರೆ. ಕಲ್ಪ-ಕಲ್ಪಾಂತರ, ಜನ್ಮ-ಜನ್ಮಾಂತರ ಸಂಗಮಯುಗದಲ್ಲಿ ಅವರೇ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾರೆ. ತ್ರೇತಾಯುಗದಲ್ಲಿ ಬರುವವರಿಗೆ ಫೇಲ್ ಎಂದು ಹೇಳಲಾಗುತ್ತದೆ. ಯಾರು ಸ್ವರ್ಗವಾಸಿಗಳಾಗುತ್ತಾರೆ ಅವರಿಗೆ ಸಂಪೂರ್ಣ ಪಾಸ್ ಎಂದು ಹೇಳಲಾಗುತ್ತದೆ. ಕಲ್ಪ-ಕಲ್ಪಾಂತರ, ಜನ್ಮ-ಜನ್ಮಾಂತರ ಅವರೇ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾರೆ. ಯಾರು ಹೂವಾಗುವುದಿಲ್ಲ, ಅಂತಹವರಿಗೆ ನೀವು ಎಷ್ಟಾದರೂ ಬಲವಾಗಿ ಸೆಳೆಯಬಹುದು ಆದರೆ ಅವರು ಸಂಪೂರ್ಣರಾಗುವುದಿಲ್ಲ. ಎಕ್ಕದ ಹೂ ಸಹ ಹೂವಲ್ಲವೇ! ಅಂತಹವರು ಮುಳ್ಳಿನಿಂದ ಚುಚ್ಚು(ದುಃಖ)ತ್ತಿರುತ್ತಾರೆ. ಎಲ್ಲವೂ ವಿದ್ಯೆಯ ಮೇಲೆ ಆಧಾರವಾಗಿದೆ. ಮಾಯೆಯು ಒಳ್ಳೊಳ್ಳೆಯ ಮಕ್ಕಳನ್ನೂ ಸಹ ಮುಳ್ಳನ್ನಾಗಿ ಮಾಡುತ್ತದೆ. ಅವರು ಪದವಿ ಭ್ರಷ್ಟರಾಗುತ್ತಾರೆ. ಯಾರು ತಮ್ಮ ಮನೆಯನ್ನು ಬಿಟ್ಟು ಬೇರೆ ಕಡೆ ಹೋಗುತ್ತಾರೆ, ಅವರಿಗೆ ಭ್ರಷ್ಟರೆಂದು ಹೇಳಲಾಗುತ್ತದೆ. ತಂದೆಯು ಮಾಯೆಯಿಂದ ಮುಕ್ತಗೊಳಿಸಲು ಬಂದಿದ್ದಾರೆ. ಮಕ್ಕಳು ಹೇಳುತ್ತಾರೆ- ಬಾಬಾ ಮಾಯೆಯು ಬಹಳ ಭಯಂಕರವಾಗಿದೆ. ತನ್ನ ಕಡೆ ಆಕರ್ಷಣೆ ಮಾಡುತ್ತದೆ. ಮಾಯೆಯೆಂಬ ಅಯಸ್ಕಾಂತವು ಕಡಿಮೆಯೇನಿಲ್ಲ. ಈ ಸಮಯದಲ್ಲಿ ಎಷ್ಟೊಂದು ಸುಂದರತೆಯು ಹೆಚ್ಚಿದೆ ನೋಡಿ...! ಎಷ್ಟೊಂದು ಫ್ಯಾಷನೇಬಲ್ ಆಗಿದ್ದಾರೆ...! ಸಿನಿಮಾದಲ್ಲಿ ಏನೇನು ತೋರಿಸುತ್ತಾರೆ! ಮೊದಲು ಈ ಸಿನಿಮಾಗಳು ಇರಲಿಲ್ಲ. ಇವೆಲ್ಲಾ 100 ವರ್ಷದೊಳಗೆ ತಯಾರಾಗಿವೆ. ಇದರಲ್ಲಿ ನಾಟಕದ ರಹಸ್ಯವನ್ನೂ ಸಹ ತಿಳಿಸಬೇಕು. ಈ ಸೃಷ್ಟಿ ನೂರು ವರ್ಷದಲ್ಲಿ ಸ್ವರ್ಗದಂತೆ ಆಗಿದೆ. ಅಲ್ಲಿ ಈ ವಿಜ್ಞಾನವೂ ಸಹ ಬಹಳ ಸುಖವನ್ನು ಕೊಡುತ್ತದೆ ಹಾಗೂ ಅಲ್ಲಿ ವಿಜ್ಞಾನದ ಆಡಂಬರವಿರುವುದಿಲ್ಲ. ಇದು ಎಷ್ಟೊಂದು ಸುಖವನ್ನು ಕೊಡುತ್ತದೆ ಆದರೆ ಆ ಸುಖ ಶಾಶ್ವತವಾಗಲು ಈ ಹಳೆಯ ಪ್ರಪಂಚದ ವಿನಾಶವಾಗುತ್ತದೆ.

ತಂದೆಯು ಮಕ್ಕಳನ್ನು ಶ್ರೇಷ್ಠತೆಯಲ್ಲಿ ಕರೆದೊಯ್ಯಲು ಎಷ್ಟೊಂದು ಶ್ರಮ ಪಡುತ್ತಿದ್ದಾರೆ ನೋಡಿ....! ಆದರೆ ಕೆಲವರು ತಂದೆ ನಮಗೆ ಓದಿಸುತ್ತಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳುವುದಿಲ್ಲ. ಒಳ್ಳೊಳ್ಳೆಯ ಮಕ್ಕಳೂ ಸಹ ಮಾಯೆಯ ಬಂಧನದಲ್ಲಿ ಬಂದು ಬಿಡುತ್ತಾರೆ. ಮಾಯೆಯು ಸಂಪೂರ್ಣವಾಗಿ ವಶ ಮಾಡಿಕೊಳ್ಳುತ್ತದೆ. ಆದರೆ ಒಮ್ಮೆ ಜ್ಞಾನ ಕೇಳಿರುವ ಕಾರಣ ಅಗತ್ಯವಾಗಿ ಸ್ವರ್ಗದಲ್ಲಿ ಬರುತ್ತಾರೆ. ಆದರೆ ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳುವುದಿಲ್ಲ. ಎಲ್ಲರೂ ನಾವು ನಾರಾಯಣನಾಗುತ್ತೇವೆಂದು ಹೇಳುತ್ತಾರೆ ಆದರೆ ಅಂತಹ ಪುರುಷಾರ್ಥವನ್ನೂ ಮಾಡಬೇಕು. ಇದೆಲ್ಲವೂ ನಾಟಕದ ಆಟವಾಗಿದೆ. ಕೆಲವರು ಮೇಲೇರುತ್ತಾರೆ (ಶ್ರೇಷ್ಠ), ಕೆಲವರು ಬೀಳುತ್ತಾರೆ, ಹೀಗೆ ಏರುಪೇರುಗಳು ಆಗುತ್ತಿರುತ್ತದೆ. ಎಲ್ಲವೂ ನೆನಪಿನ ಯಾತ್ರೆಯ ಮೇಲೆ ಆಧಾರವಾಗಿದೆ. ತಂದೆಯು ನಿಮಗೆ ಅಪಾರವಾದ ಖಜಾನೆಯನ್ನು ಕೊಡುತ್ತಾರೆ. ಅಲ್ಲಿ ಕರ್ಮ ಭೋಗದ ಮಾತುಗಳಿರುವುದಿಲ್ಲ. ಈ ಸಮಯದಲ್ಲಿ ಯಾರು ಇಲ್ಲಿ ಜಮಾ ಮಾಡಿಕೊಳ್ಳುತ್ತಾರೆ ಅವರೇ ಪೂರ್ಣ ಆಸ್ತಿಯನ್ನು ಪಡೆಯುತ್ತಾರೆ. ಮೇಲೆ ಹತ್ತುವವರು ನಂತರ ಇಳಿಯುತ್ತಾರೆಂದು ಯೋಚಿಸಬಾರದು. ಜಾಸ್ತಿ ಇಳಿದವರು ಮತ್ತೆ ಮೇಲೆ ಹತ್ತಲೇಬೇಕು. ನಾಟಕದನುಸಾರ ಪುರುಷಾರ್ಥ ನಡೆಯುತ್ತದೆ. ಇಬ್ಬರಿಗೂ ಎಷ್ಟೊಂದು ಪೂಜೆ ನಡೆಯುತ್ತದೆ ನೋಡಿ...! ಶಿವನಿಗೆ ಹೆಚ್ಚು ಪೂಜೆ ಆಗುತ್ತದೆ ಮತ್ತೆ ಅವರನ್ನು ಕಲ್ಲು-ಮುಳ್ಳನಲ್ಲಿದ್ದಾರೆಂದು ಹೇಳುತ್ತಾರೆ. ಇದು ಎಷ್ಟೊಂದು ಅಜ್ಞಾನವಾಗಿದೆ. ನಾವೇ ಪೂಜ್ಯರಾಗಿದ್ದೆವು, ಪುನಃ ನಾವೇ ಪೂಜ್ಯರಾಗುತ್ತಿದ್ದೇವೆ ಎಂದು ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಒಂದುವೇಳೆ ಶಿವನ ಪೂಜೆಯನ್ನು ಮಾಡುತ್ತಾರೆ, ಬಲಿಯನ್ನು ಕೊಡುತ್ತಾರೆ, ಆದರೆ ಅವರು ಜ್ಞಾನ ಸಾಗರ ತಂದೆಯು ಬಂದು ಹೇಗೆ ಓದಿಸುತ್ತಾರೆಂದು ಶಿವನನ್ನು ಯಾರೂ ತಿಳಿದುಕೊಂಡಿಲ್ಲ. ಈಗ ಓದಿ ಪುರುಷಾರ್ಥ ಮಾಡಿ ಶ್ರೇಷ್ಠ ಪದವಿಯನ್ನು ಪಡೆಯಬೇಕಾಗಿದೆ. ಮಾಯೆಯು ಯಾರನ್ನೂ ಬಿಡುವುದಿಲ್ಲ. ಒಮ್ಮೆಲೆ ಹಿಡಿದುಕೊಳ್ಳುತ್ತದೆ. ಮಕ್ಕಳೇ, ಸತ್ಯ-ಸತ್ಯ ಚಾರ್ಟನ್ನು ಬರೆಯಿರಿ ಎಂದು ತಂದೆ ಹೇಳುತ್ತಾರೆ. ಕೆಲವು ಮಕ್ಕಳು ಸತ್ಯವನ್ನು ಹೇಳದಿರುವ ಕಾರಣ ಶಿಕ್ಷೆಗೆ ಗುರಿಯಾಗುತ್ತಾರೆ. ಶಿಕ್ಷೆಯ ಸಮಯದಲ್ಲಿ ಕ್ಷಮಿಸಿ-ಕ್ಷಮಿಸಿ ಎಂದು ಹೇಳುತ್ತಾರೆ. ಈಗ ಕ್ಷಮೆ ಮಾಡಿ ಮುಂದೆ ಈ ರೀತಿ ಮಾಡುವುದಿಲ್ಲ ಎನ್ನುತ್ತಾರೆ. ಚಿಕ್ಕ ಮಗು ಒಂದುವೇಳೆ ತಪ್ಪು ಮಾಡಿ ತಂದೆಯು ಪೆಟ್ಟು ಕೊಟ್ಟರೆ ಮತ್ತೆ ಮಾಡುವುದಿಲ್ಲ.. ಮತ್ತೆ ಮಾಡುವುದಿಲ್ಲ ಎಂದು ಹೇಳುತ್ತದೆ. ಇವರು ಬೇಹದ್ದಿನ ತಂದೆ ಆಗಿದ್ದಾರೆ. ಇಷ್ಟೊಂದು ಶ್ರೇಷ್ಠ ತಂದೆ ಎಷ್ಟೊಂದು ನಮ್ರತೆಯಿಂದ ನಡೆದುಕೊಳ್ಳುತ್ತಾರೆ! ಎಷ್ಟೊಂದು ನಮ್ರತೆಯುಳ್ಳವರಾಗಿದ್ದಾರೆ. ಹೇಗೆ ಚಿಕ್ಕ ಮಕ್ಕಳು ನಮ್ರರಾಗಿರುತ್ತಾರೆ. ಯಾವುದೇ ಮಾತು ಬಂದರೆ ಒಳ್ಳೆಯದು ಎಂದು ಹೇಳುತ್ತಾರೆ ಏಕೆಂದರೆ ನಾಟಕದಲ್ಲಿ ಈ ರೀತಿ ನಿಗಧಿಯಾಗಿತ್ತು ಎಂದು ತಿಳಿದು ನಾಟಕದಂತೆ ನಡೆದುಕೊಳ್ಳುತ್ತಾರೆ. ಮುಂದೆ ಈ ರೀತಿಯಾಗಬಾರದು ಎಂದು ತಿಳಿಸುತ್ತಾರೆ. ಶ್ರೀಮತ ಹಾಗೂ ಆಸುರಿಮತ. ಈ ಬ್ರಹ್ಮನೂ ಸಹ ಅಲೌಕಿಕ ತಂದೆ ಆಗಿದ್ದಾರಲ್ಲವೇ! ಆದರೂ ಬೇಹದ್ದಿನ ತಂದೆಯೂ ಇದ್ದಾರೆ. ಹದ್ದಿನ ತಂದೆಯ ಮಾತನ್ನು ಒಂದುವೇಳೆ ಯಾರಾದರೂ ಮಾನ್ಯತೆ ಮಾಡದಿರಬಹುದು, ಬೇಹದ್ದಿನ ತಂದೆಯು ಇವರನ್ನು

(ಬ್ರಹ್ಮಾರವರನ್ನು) ನಿಮಿತ್ತ ಮಾಡಿರುವುದರಿಂದ ಅಗತ್ಯವಾಗಿ ಅವರ ಮಾತನ್ನು ಒಪ್ಪಿಕೊಳ್ಳಬೇಕು. ಆದುದರಿಂದ ಬಾಬಾರವರು ತಿಳಿಸುತ್ತಾರೆ - ಮಾಯೆಯೇನು ಕಡಿಮೆಯಿಲ್ಲ, ಉಲ್ಟಾ ಕರ್ಮವನ್ನು ಮಾಡಿಸುತ್ತದೆ. ಇದು ಈಶ್ವರೀಯ ಮತವಾಗಿದೆ ಎಂದು ತಿಳಿಸಬೇಕು. ಒಂದುವೇಳೆ ಇವರ ಮೂಲಕ ಅಂತಹ ಮತವೇನಾದರೂ ಸಿಕ್ಕಿದರೆ ನಾನು ಸರಿ ಪಡಿಸುತ್ತೇನೆಂದು ತಂದೆಯು ತಿಳಿಸುತ್ತಾರೆ. ತಂದೆಯು ಅನುಭವೀ ರಥವನ್ನು ತೆಗೆದುಕೊಂಡಿದ್ದಾರೆ. ಇವರು ಎಷ್ಟೊಂದು ನಿಂದನೆಯನ್ನು ಕೇಳಬೇಕಾಯಿತು. ತಂದೆಯ ಜೊತೆ ಬಹಳ ಸ್ವಚ್ಛವಾಗಿರಬೇಕು. ಯಾರು ಎಷ್ಟೆಷ್ಟು ಸ್ವಚ್ಛತೆಯಿಂದ ನಡೆಯುತ್ತಾರೆ, ಅದರಂತೆಯೇ ಅವರ ರಕ್ಷಣೆಯೂ ಆಗುತ್ತದೆ. ಅಸತ್ಯ ಚಲನೆಯಲ್ಲಿ ನಡೆದುಕೊಳ್ಳುವವರ ರಕ್ಷಣೆಯಾಗುವುದಿಲ್ಲ, ಅಂತಹವರಿಗೆ ಶಿಕ್ಷೆಯು ನಿಗದಿಯಾಗುತ್ತದೆ. ಮಾಯೆಯು ಮೂಗನ್ನು ಹಿಡಿಯುತ್ತದೆ. ಆಗ ಮಾಯೆ ನಮ್ಮನ್ನು ತಿಂದು ಬಿಟ್ಟಿತು, ಆದ್ದರಿಂದ ನಾವು ವಿದ್ಯೆಯನ್ನು ಬಿಟ್ಟೆವೆಂದು ಮಕ್ಕಳು ತಿಳಿದುಕೊಳ್ಳುತ್ತಾರೆ. ಏನೇ ಆದರೂ ಸಹ ಎಂದಿಗೂ ವಿದ್ಯೆಯನ್ನು ನಿಲ್ಲಿಸಬಾರದು. ಯಾರು ಏನು ಮಾಡುವರೋ ಅದರಂತೆಯೇ ಪಡೆದುಕೊಳ್ಳುತ್ತಾರೆ. ಯಾವಾಗ ಪಡೆದುಕೊಳ್ಳುತ್ತಾರೆ? ಭವಿಷ್ಯದಲ್ಲಿ ಪಡೆದುಕೊಳ್ಳುತ್ತಾರೆ ಏಕೆಂದರೆ ಈಗ ಪ್ರಪಂಚದಲ್ಲಿ ಪರಿವರ್ತನೆ ಆಗುವುದಿದೆ. ಇದನ್ನು ನಿಮ್ಮ ವಿನಃ ಬೇರೆ ಯಾರೂ ಸಹ ತಿಳಿದುಕೊಂಡಿಲ್ಲ. ನಿಮ್ಮಲ್ಲಿಯೂ ಬಹಳ ಮಕ್ಕಳು ಮರೆತು ಹೋಗುತ್ತಾರೆ. ಒಂದುವೇಳೆ ತಂದೆಯ ನೆನಪಿನಲ್ಲಿದ್ದರೆ ಖುಷಿಯೂ ಇರುತ್ತದೆ ಆದರೆ ಒಮ್ಮೆಯೇ ಮಾಯೆ ಮರೆಯುವಂತೆ ಮಾಡುತ್ತದೆ. ಈ ಮಾಯೆಯ ಜೊತೆ ಯುದ್ಧವು ಅಂತ್ಯದವರೆಗೂ ನಡೆಯುತ್ತಿರುತ್ತದೆ. ಕೆಲವು-ಕೆಲವು ಮಕ್ಕಳು ನಮ್ಮಿಂದ ಹೀಗೆ ಆಗಿ ಹೋಯಿತು ಎಂದು ತಿಳಿದಿದ್ದರೂ ಗೌರವದ ಭಯದಿಂದ ಸತ್ಯವನ್ನು ಹೇಳುವುದಿಲ್ಲ. ಆಂತರ್ಯದಲ್ಲಿಯೇ ದುಃಖಿ ಆಗುತ್ತಿರುತ್ತಾರೆ. ಯಾರಾದರೂ ಯುಗಲ್ ಇದ್ದರೆ ತಿಳಿಯುತ್ತಾರೆ - ಒಬ್ಬರು ಹೇಳಿದರೆ ನಾವು ಹೇಳೋಣ. ಅದೃಷ್ಟದಲ್ಲಿ ಶ್ರೇಷ್ಠ ಪದವಿ ಇಲ್ಲದಿದ್ದರೆ ಸರ್ಜನ್ನಿಂದ ಮುಚ್ಚಿಡುತ್ತಾರೆ. ಎಷ್ಟೆಷ್ಟು ಮುಚ್ಚಿಡುತ್ತಾರೆ ಅಷ್ಟೇ ಕೆಳಗೆ ಇಳಿಯುತ್ತಾ ಹೋಗುತ್ತಾರೆ. ಈ ಕಣ್ಣುಗಳು ಕುದೃಷ್ಟಿಯನ್ನು ಬಿಡುವುದೇ ಇಲ್ಲ. ಕೆಲವರಂತೂ ಬಹಳ ಒಳ್ಳೆಯ ಮಕ್ಕಳಿದ್ದಾರೆ ಅವರೆಂದಿಗೂ ಬೇರೆಯವರನ್ನು ನೆನಪು ಮಾಡುವುದಿಲ್ಲ. ಹೇಗೆ ಪತಿವ್ರತಾ ಸ್ತ್ರೀಯು ಎಂದೂ ಯಾವುದೇ ಪರಪುರುಷನಲ್ಲಿ ದೃಷ್ಟಿ ಹೋಗುವುದಿಲ್ಲ. ಆದುದರಿಂದ ತಂದೆಯು ತಿಳಿಸುತ್ತಾರೆ-ಒಂದುವೇಳೆ ಮಾಲೆಯ ಮಣಿಯಾಗಬೇಕೆಂದರೆ ನಿಮ್ಮ ಸ್ಥಿತಿ ಹೀಗೆಯೇ ಇರಬೇಕು. ವಿಶ್ವದ ಮಾಲೀಕರಾಗುವುದು ಕಡಿಮೆ ಮಾತೇನು! ನಿಮಗೆ ಬೇಹದ್ದಿನ ತಂದೆಯೇ ಓದಿಸುತ್ತಿರುವಾಗ ಬೇರೆ ಇನ್ನೇನು ಬೇಕು? ತಂದೆ ನಿಮಗೆ ಪ್ರತ್ಯಕ್ಷವಾಗಿ ತೋರಿಸುತ್ತಾರೆ-ಇಂತಹವರಲ್ಲಿ ಈ ವಿಶೇಷತೆ ಇದೆ. ಆದುದರಿಂದ ನಂಬರ್ವಾರ್ ನೆನಪು-ಪ್ರೀತಿಯನ್ನು ಕೊಡುತ್ತಾರೆ. ತಂದೆಯು ಇಲ್ಲಿ ಕುಳಿತಿದ್ದರೂ ಸಹ ಸೇವಾಧಾರಿ ಮಕ್ಕಳ ಕಡೆ ಬುದ್ಧಿಯಿರುತ್ತದೆ. ಅಜ್ಞಾನ ಕಾಲದಲ್ಲಿಯೂ ಆಜ್ಞಾಕಾರಿ ಮಕ್ಕಳೊಂದಿಗೆ ಪ್ರೀತಿಯಿರುತ್ತದೆ. ನನ್ನ ಯಾವ ಮಕ್ಕಳು ಉತ್ತಮ ಸೇವೆಯನ್ನು ಮಾಡುತ್ತಾರೆಂದು ತಂದೆಯು ತಿಳಿದುಕೊಂಡಿದ್ದಾರೆ. ನೀವು ಬ್ರಹ್ಮಾಕುಮಾರ ಹಾಗೂ ಬ್ರಹ್ಮಾಕುಮಾರಿಯಾಗಿದ್ದೀರಿ. ಶಿವ ತಂದೆಗೆ ಮೊಮ್ಮಕ್ಕಳಿಗೆ ತಾತನಿಂದ ಅಗತ್ಯವಾಗಿ ಆಸ್ತಿ ಸಿಗಬೇಕು. ಬ್ರಹ್ಮಾ ತಂದೆಯ ಬಳಿ ಆಸ್ತಿಯಿಲ್ಲ. ಸ್ವಯಂ ತಂದೆ ಹೇಳುತ್ತಾರೆ - ನಾನು ನೀವಾತ್ಮರ ಬೇಹದ್ದಿನ ತಂದೆಯಾಗಿದ್ದೇನೆ. ನಿಮಗೆ ಬೇಹದ್ದಿನ ಅಸ್ತಿಯನ್ನು ಕೊಡುತ್ತೇನೆ ಆದ್ದರಿಂದ ಈಗ ನನ್ನ ಶ್ರೀಮತದಂತೆ ನಡೆಯಿರಿ. ನಾನು ನೀವು ಮಕ್ಕಳನ್ನು ನನ್ನ ಸಮಾನ ಅಶರೀರಿ ಮಾಡಿ ಮನೆಗೆ ಹಿಂತಿರುಗಿ ಕರೆದೊಯ್ಯಲು ಬಂದಿದ್ದೇನೆ. ಜ್ಞಾನ-ಯೋಗದಿಂದ ಈಗ ನಿಮ್ಮ ಜ್ಯೋತಿ ಬೆಳಗಲ್ಪಡುತ್ತಿದೆ. ಒಂದುವೇಳೆ ಜ್ಞಾನ-ಯೋಗದಲ್ಲಿ ಸರಿಯಾಗಿ ಇಲ್ಲದಿದ್ದರೆ ಧರ್ಮರಾಜನ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಆದುದರಿಂದ ಮೊದಲು ತಮ್ಮ ವಿಕರ್ಮಗಳನ್ನು ಭಸ್ಮ ಮಾಡಿಕೊಳ್ಳಿ. ಈ ಸಮಯದ ಮನುಷ್ಯರು ತಮ್ಮನ್ನು ಸ್ವರ್ಗದಲ್ಲಿದ್ದೇವೆಂದು ತಿಳಿದುಕೊಳ್ಳುತ್ತಾರೆ ಆದರೆ ಅದು ಅಲ್ಪಕಾಲದ ಸುಖವಾಗಿದೆ. ಅವರಿಗೆ ಬೇಹದ್ದಿನ ತಂದೆ ಆಸ್ತಿಯನ್ನೂ ಸಹ ಕೊಡುವುದಿಲ್ಲ. ತಂದೆ ಹೇಳುತ್ತಾರೆ - ನಾನು ಬಡವರ ಬಂಧು ಆಗಿದ್ದೇನೆ. ಯಾರು ಸಂಪೂರ್ಣ ಬಡವರಾಗಿದ್ದು ಪತಿತ ಅಹಲ್ಯೆಯರಿದ್ದಾರೆ, ಅವರನ್ನು ಶ್ರೀಮಂತರನ್ನಾಗಿ ಮಾಡುತ್ತೇನೆ. ಒಂದುವೇಳೆ ನಿಮ್ಮ ಬಳಿ ಯಾರಾದರೂ ಪತಿತರು ಬರಬಹುದು ಆದರೆ ಅವರು ಕಡಿಮೆ ಪದವಿಯನ್ನು ತೆಗೆದುಕೊಳ್ಳುತ್ತಾರೆ. ವಿಜಯಮಾಲೆಯಲ್ಲಿ ಬರುವುದಿಲ್ಲ. ಇಲ್ಲಿ ಬೇಹದ್ದಿನ ತಂದೆಯ ಜೊತೆ ವ್ಯಾಪಾರ ಮಾಡಬೇಕಾಗುತ್ತದೆ. ಬಾಬಾ ಇದೆಲ್ಲವೂ ಮಣ್ಣಿನಲ್ಲಿ ಸೇರಿ ಹೋಗುತ್ತದೆ ಆದುದರಿಂದ ನಾವು ನಿಮಗೆ ಬಲಿಹಾರಿಯಾಗುತ್ತೇವೆ. ಇದೆಲ್ಲವನ್ನು ನೀವು ತೆಗೆದುಕೊಳ್ಳಿ, ನಮ್ಮನ್ನು ಸ್ವರ್ಗದ ಮಾಲೀಕರನ್ನಾಗಿ ಮಾಡಿ. ತಂದೆಯು ತಿಳಿಸುತ್ತಾರೆ-ನಾನಂತೂ ದಾತನಾಗಿದ್ದೇನೆ. ಈ ರಾಜ್ಯವನ್ನು ಸ್ಥಾಪನೆ ಮಾಡಲು ಅಥವಾ ವಿಶ್ವದ ಮಾಲೀಕರಾಗಲು ಯಾವ ಖರ್ಚು ಆಗುವುದಿಲ್ಲ. ಅಲ್ಲಿ ಯುದ್ಧಕ್ಕಾಗಿ ಎಷ್ಟೊಂದು ಖರ್ಚು ಮಾಡುತ್ತಾರೆ ನೋಡಿ...! ಇಲ್ಲಿ ನಿಮಗೆ ಏನು ಖರ್ಚಿದೆ? ಏಕೆಂದರೆ ಇಲ್ಲಿ ಯಾವುದೇ ಆಯುಧಗಳ ಶಕ್ತಿಯೇ ಇಲ್ಲ. ನೀವು ಯೋಗಬಲದಿಂದ ವಿಶ್ವದ ಮಾಲೀಕರಾಗುತ್ತೀರಿ. ಅವರು ಬಾಹುಬಲದಿಂದ ಇಷ್ಟೊಂದು ಯುದ್ಧ ಮಾಡಿದರೂ ಸಹ ವಿಶ್ವದ ಮಾಲೀಕರಾಗುವುದಿಲ್ಲ. ವಿಶ್ವದ ಮಾಲೀಕರಾಗುವುದು ನಾಟಕದಲ್ಲಿ ಅವರ ಪಾತ್ರವೇ ಇಲ್ಲ. ಸತ್ಯ-ಸತ್ಯ ರಾಜಯೋಗವನ್ನು ಬೇಹದ್ದಿನ ತಂದೆಯೇ ಕಲಿಸುತ್ತಾರೆ. ರಾಜಯೋಗದಿಂದ ಪರಮಪಿತ ಪರಮಾತ್ಮನು ಸ್ವರ್ಗದ ಸ್ಥಾಪನೆ ಮಾಡಿದ್ದರು ಎಂದು ನೀವು ತಿಳಿದುಕೊಂಡಿದ್ದೀರಿ. ಈಗ ನೀವು ಸಂಗಮಯುಗದಲ್ಲಿ ಓದುತ್ತಿದ್ದೀರಿ ಹಾಗೂ ವಿದ್ಯೆಯನುಸಾರ ನಂಬರ್ವಾರ್ ಪದವಿ ಸಿಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆಯ ಸಮಾನ ನಮ್ರತೆಯ ಗುಣವನ್ನು ಧಾರಣೆ ಮಾಡಬೇಕು. ಯಾರಿಗೂ ಮುಳ್ಳನ್ನು (ದುಃಖ) ಚುಚ್ಚಬಾರದು. ಹೂವಾಗಿ ಸುಗಂಧವನ್ನು ಬೀರಬೇಕು.

2. ಸತ್ಯತೆಯ ಗುಣವನ್ನು ಧಾರಣೆ ಮಾಡಿ, ಸರ್ಜನ್ನಿಂದ ಯಾವ ಮಾತನ್ನೂ ಬಚ್ಚಿಡಬಾರದು. ಎಂತಹ ಪರಿಸ್ಥಿತಿಯಲ್ಲಿಯೂ ವಿದ್ಯೆಯನ್ನು ಬಿಡಬಾರದು, ಆಜ್ಞಾಕಾರಿಗಳಾಗಬೇಕು.

ವರದಾನ: ತಂದೆಯ ಮೂಲಕ ಪ್ರಾಪ್ತಿಯಾಗಿರುವ ಗಳನ್ನು ಸಮಯದಲ್ಲಿ ಕಾರ್ಯದಲ್ಲಿ ಉಪಯೋಗಿಸುತ್ತಾ ಫಲೀಭೂತಗೊಳಿಸುವಂತಹ ಿ ಮೂರ್ತಿ ಭವ.

ಬಾಪ್ದಾದಾರವರ ಮೂಲಕ ಯಾವುದೆಲ್ಲಾ ವರದಾನಗಳು ಪ್ರಾಪ್ತಿಯಾಗಿದೆಯೋ ಅದನ್ನು ಸಮಯದಲ್ಲಿ ಕಾರ್ಯದಲ್ಲಿ ಉಪಯೋಗಿಸುತ್ತೀರೆಂದರೆ, ಆ ವರದಾನವು ಸದಾಕಾಲಕ್ಕಾಗಿ ತಮ್ಮದಾಗಿರುತ್ತದೆ. ವರದಾನದ ಬೀಜವನ್ನು ಫಲದಾಯಕಗೊಳಿಸಲು ಅದಕ್ಕೆ ಮತ್ತೆ-ಮತ್ತೆ ಸ್ಮೃತಿಯ ಜಲ ಕೊಡಿ, ವರದಾನದ ಸ್ವರೂಪದ ಸ್ಥಿತರಾಗುವ ದೂಪವನ್ನು ಕೊಡಿ. ಇದರಿಂದ ಒಂದು ವರದಾನವು ಅನೇಕ ವರದಾನಗಳನ್ನು ಜೊತೆಯಲ್ಲಿ ಕರೆತರುತ್ತವೆ ಹಾಗೂ ಫಲ ಸ್ವರೂಪ ವರದಾನಿ ಮೂರ್ತಿಯಾಗಿ ಬಿಡುವಿರಿ. ಸಮಯದಲ್ಲಿ ಎಷ್ಟು ವರದಾನಗಳನ್ನು ಕಾರ್ಯದಲ್ಲಿ ಉಪಯೋಗಿಸುತ್ತೀರೋ ಅಷ್ಟು ವರದಾನ ಹಾಗೂ ಶ್ರೇಷ್ಠ ಸ್ವರೂಪವು ಕಾಣಿಸುತ್ತಿರುತ್ತದೆ.

ಸ್ಲೋಗನ್: ಗಮನವು ಸ್ವಾಭಾವಿಕವಾಗಿ ಇರುತ್ತದೆಯೆಂದರೆ ಸ್ವತಹವಾಗಿಯೇ ಒತ್ತಡವು ಸಮಾಪ್ತಿಯಾಗುವುದು.